ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

Azadi Ka Amrit Mahotsav

**NAAC Accredited with "A" Grade 2022**
**ಸಿಂಡಿಕೇಟ ವಿಭಾಗ**

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-69/2026-27/32 ದಿನಾಂಕ: 21 MAY 2026

## :: ಸಿಂಡಿಕೇಟ ಸಭೆಯ ನಡಾವಳಿಗಳು ::

ಕರ್ನಾಟಕ ವಿಶ್ವವಿದ್ಯಾಲಯದ 2026-27ನೇ ಸಾಲಿನ 1ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ 13 ಮೇ, 2026 ರಂದು ಮುಂಜಾನೆ 11:00 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಿಂಡಿಕೇಟ ಸಭೆಗೆ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಶ್ರೀ. ಸಂಜಯ ಕಪಟಕರ, ಧಾರವಾಡ | ಸದಸ್ಯರು |
| 3) | ಶ್ರೀ. ಸದಾನಂದ ಚಿಂತಾಮಣಿ, ಕಲಘಟಗಿ | ಸದಸ್ಯರು |
| 4) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 5) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 6) | ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| 7) | ಡಾ. ಎಸ್. ವಿ. ವಸ್ತ್ರದ, ಪ್ರಾಚಾರ್ಯರು, ಅಂಕೋಲಾ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 8) | ಶ್ರೀ. ಮಹೇಶ ವಾಯ್. ಹುಲೇನ್ನವರ, ಧಾರವಾಡ | ಸದಸ್ಯರು |
| 9) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 10) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 11) | ಡಾ. ಶಿವಾನಂದ ವಿ. ನಾಯಕ, ಅಂಕೋಲಾ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 12) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 13) | ಡಾ(ಶ್ರೀಮತಿ). ಎಸ್. ಬಿ. ಮುನೋಳಿ, ಹಿರಿಯ ಪ್ರಾಧ್ಯಾಪಕರು, | ಸದಸ್ಯರು |
| 14) | ಡಾ. ಎ. ಎಮ್. ಕಡಕೋಳ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 15) | ಡಾ. ಮೃತ್ಯುಂಜಯ ಎಚ್. ಅಗಡಿ, ಪ್ರಭಾರ ಕುಲಸಚಿವರು (ಆಡಳಿತ) ಮತ್ತು ಡೀನರು ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 15 ಜನ ಸದಸ್ಯರುಗಳು (02 ಸದಸ್ಯರು ಆನ್‌ಲೈನ್ ಮತ್ತು 13 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಸಭೆಯ ಅಧ್ಯಕ್ಷರಾದ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

## ದಿನಾಂಕ 13.05.2026 ರಂದು ಜರುಗಿದ ಸಾಧಾರಣ ಸಿಂಡಿಕೇಟ ಸಭೆ

**ಮಾನ್ಯ ಕುಲಪತಿಗಳಿಂದ ಪ್ರಾರಂಭ:**

**ನೂತನವಾಗಿ ಸಿಂಡಿಕೇಟ್ ಸದಸ್ಯರೆಂದು ನಾಮನಿರ್ದೇಶನಗೊಂಡ ಸದಸ್ಯರುಗಳಿಗೆ ಸ್ವಾಗತ.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1) ರ ಅಡಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಗೆ ಈ ಕೆಳಕಾಣಿಸಿದ ಮಹನಿಯರು ಸಿಂಡಿಕೇಟ್ ಸದಸ್ಯರೆಂದು ನಾಮನಿರ್ದೇಶನಗೊಂಡಿರುತ್ತಾರೆ.

| ಅ. ನಂ. | ಹೆಸರು | ನಾಮನಿರ್ದೇಶನಗೊಂಡ ದಿನಾಂಕ |
|---|---|---|
| 1 | ಡಾ. (ಶ್ರೀಮತಿ). ಎಸ್. ಬಿ. ಮುನೋಳಿ<br>ಹಿರಿಯ ಪ್ರಾಧ್ಯಾಪಕರು | 02.04.2026 |
| 2 | ಶ್ರೀ. ಸಂಜಯ ಕಪಟಕರ<br>ಗೌರವಾನ್ವಿತ ರಾಜ್ಯಪಾಲರ ನಾಮಾಂಕಿತರು | 15.04.2026 |
| 3 | ಶ್ರೀ. ಸದಾನಂದ ಚಿಂತಾಮಣಿ<br>ಗೌರವಾನ್ವಿತ ರಾಜ್ಯಪಾಲರ ನಾಮಾಂಕಿತರು | 15.04.2026 |
| 4 | ಡಾ. ಎ. ಎಮ್. ಕಡಕೋಳ<br>ಕುಲಸಚಿವರು (ಮೌಲ್ಯಮಾಪನ) | 28.04.2026 |
| 5 | ಡಾ. ಮೃತ್ಯುಂಜಯ ಎಚ್. ಅಗಡಿ<br>ಪ್ರಭಾರ ಕುಲಸಚಿವರು | 29.04.2026 |
| 6 | ಶ್ರೀ. ಕೇಶವ ಎಚ್<br>ಜಂಟೀ ನಿರ್ದೇಶಕರು, ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, | 01.05.2026 |

ಸದರಿಯವರನ್ನು ಸಿಂಡಿಕೇಟ ಸಭೆಗೆ ಸದಸ್ಯರೆಂದು ನಾಮನಿರ್ದೇಶನ ಮಾಡಲಾಗಿದ್ದು ಇವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದಿಂದ ಸ್ವಾಗತ.

-

-

-

-

-

-

-

ಕುಲಸಚಿವರು

ಕುಲಪತಿಗಳು

**ಸಿಂಡಿಕೇಟ ಸದಸ್ಯರ ಸದಸ್ಯತ್ವದ ಅವಧಿ ಕೊನೆಗೊಂಡ ಪ್ರಯುಕ್ತ ವಂದನೆ.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1) ರ ಅಡಿಯಲ್ಲಿ ಈ ಕೆಳಕಾಣಿಸಿದ ಮಹನಿಯರ ಸಿಂಡಿಕೇಟ ಸದಸ್ಯತ್ವವು ಕೊನೆಗೊಂಡಿರುತ್ತದೆ.

| ಅ.ನಂ. | ಹೆಸರು | ಅವಧಿ ಕೊನೆಗೊಂಡ ದಿನಾಂಕ |
|---|---|---|
| 1 | ಶ್ರೀಮತಿ. ರತ್ನಾ ಪಾಟೀಲ<br>ಗೌರವಾನ್ವಿತ ರಾಜ್ಯಪಾಲರ ನಾಮಾಂಕೀತರು | 28.03.2026 |
| 2 | ಡಾ. ಶಂಕರ ವಣಿಕ್ಯಾಳ, ಕೆ.ಎ.ಎಸ್.<br>ಕುಲಸಚಿವರು (ಆಡಳಿತ) | 23.04.2026 |
| 3 | ಡಾ. ಎನ್. ವಾಯ್. ಮಟ್ಟಿಹಾಳ<br>ಕುಲಸಚಿವರು (ಮೌಲ್ಯಮಾಪನ) | 28.04.2026 |
| 4 | ಡಾ.(ಶ್ರೀಮತಿ) ಕರೀಮುನ್ನಿಸ್ಸಾ ಸಯ್ಯದ್<br>ಜಂಟೀ ನಿರ್ದೇಶಕರು, ಪ್ರಾದೇಶಿಕ ಕಚೇರಿ,<br>ಕಾಲೇಜು ಶಿಕ್ಷಣ ಇಲಾಖೆ, | 30.04.2026 |

ಸದರಿಯವರಿಗೆ ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಗಿದೆ.

-
-
-
-
-
-
-
-
-
-
-
-
-
-

ಕುಲಸಚಿವರು

ಕುಲಪತಿಗಳು

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

### ದಿನಾಂಕ: 13/05/2026 ರಂದು ಜರುಗಲಿರುವ 2026-27 ನೇಯ ಸಾಲಿನ 01 ನೇಯ ಸಾಧಾರಣ ಸಿಂಡಿಕೇಟ ಸಭೆಯ ಪೂರ್ವಭಾವಿ ವಿಷಯ ಪಟ್ಟಿ

<table>
<tr><th>ಕಾರ್ಯಸೂಚಿ ಸಂಖ್ಯೆ</th><th>ವಿಷಯ</th></tr>
<tr><td rowspan="4">1)</td><td>A) ದಿನಾಂಕ 05.03.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ</td></tr>
<tr><td>ದಿನಾಂಕ 05.03.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 02ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿ, ಉಳಿದ ಎಲ್ಲ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ಸಿಂಡಿಕೇಟ್ ಒಪ್ಪಿತು.
<table>
<tr><th>ದಾಖಲಿಸಿದ ನಿರ್ಣಯ</th><th>ತಿದ್ದುಪಡಿ ಮಾಡಿದ ನಿರ್ಣಯ</th></tr>
<tr><td>ಡಾ. (ಶ್ರೀಮತಿ) ನಿರುಪಮಾ ಜೆ.ಎಮ್., ಡಾ. (ಶ್ರೀಮತಿ) ಜ್ಯೋತಿ ದೊಡಮನಿ ಮತ್ತು ಡಾ. ಹರ್ಷಾ ಡಿ. ನೀಲಗುಂದ ಇವರಿಗೆ ದಿನಾಂಕ 16.11.2023ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಯುಜಿಸಿ ಸಿಎಎಸ್ ನಿಯಮಾವಳಿಗಳ ಅನ್ವಯ Academic Level 11 ರಿಂದ 12ಕ್ಕೆ ಪದೋನ್ನತಿ ನೀಡುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಸದರಿಯವರ ನೇಮಕಾತಿ ಹೊಂದಿದ ದಿನಾಂಕದಿಂದ ಇಲ್ಲಿಯವರೆಗೆ ಸೇವಾ ದಾಖಲೆಗಳನ್ನು ವಿವರವಾದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ಅನುಮೋದಿಸಿತು.</td><td>ಡಾ. (ಶ್ರೀಮತಿ) ನಿರುಪಮಾ ಜೆ.ಎಮ್., ಡಾ. (ಶ್ರೀಮತಿ) ಜ್ಯೋತಿ ದೊಡಮನಿ ಮತ್ತು ಡಾ. ಹರ್ಷಾ ಡಿ. ನೀಲಗುಂದ ಇವರಿಗೆ ದಿನಾಂಕ 16.11.2023ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಯುಜಿಸಿ ಸಿಎಎಸ್ ನಿಯಮಾವಳಿಗಳ ಅನ್ವಯ Academic Level 11 ರಿಂದ 12ಕ್ಕೆ ಪದೋನ್ನತಿ ನೀಡುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಸದರಿಯವರ ನೇಮಕಾತಿ ಹೊಂದಿದ ದಿನಾಂಕದಿಂದ ಇಲ್ಲಿಯವರೆಗೆ ಸೇವಾ ದಾಖಲೆಗಳನ್ನು ವಿವರವಾದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ಅನುಮೋದಿಸಿತು. ಮುಂದುವರೆದು, ಸದರಿಯವರಿಂದ UNDERTAKING ಪಡೆದು, ಮುಂದಿನ ಕ್ರಮವಹಿಸಲು ಸಿಂಡಿಕೇಟ್ ತೀರ್ಮಾನಿಸಿತು.</td></tr>
</table></td></tr>
<tr><td>B) ದಿನಾಂಕ 26.03.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು.</td></tr>
<tr><td>ದಿನಾಂಕ 26.03.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸಿತು.</td></tr>
</table>

ಕುಲಸಚಿವರು



ಕುಲಪತಿಗಳು

| | |
|---|---|
| | **ಕಟ್ಟಡ ವಿಭಾಗ** |
| **2)** | ದಿನಾಂಕ: 17/03/2025 ರಂದು ಜರುಗಿದ ಸ್ಥಿರ ಆಸ್ತಿ ಮಂಡಳಿಯ ನಡಾವಳಿಗಳನ್ನು ಸಿಂಡಿಕೇಟ ಸಭೆಗೆ ಅನುಮೋದನೆಗಾಗಿ ಮರು ಮಂಡಿಸುವ ಕುರಿತು. |
| **ನಿರ್ಣಯ** | ದಿನಾಂಕ: 17/03/2025 ರಂದು ಜರುಗಿದ ಸ್ಥಿರ ಆಸ್ತಿ ಮಂಡಳಿಯ ನಡಾವಳಿಗಳನ್ನು ಸಿಂಡಿಕೇಟ ಸಭೆಗೆ ಅನುಮೋದನೆಗಾಗಿ ಮರು ಮಂಡಿಸಿದ ವಿಷಯವಾಗಿ ಚರ್ಚಿಸಿ ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ಸ್ಥಿರ ಆಸ್ತಿ ಮಂಡಳಿಯ ನಡುವಳಿಯ ಕಾರ್ಯಸೂಚಿ 19ರ ಕುರಿತಾದ ವಿವರಗಳನ್ನು ಸಿಂಡಿಕೇಟ್ ಸದಸ್ಯರುಗಳಿಗೆ ನೀಡಲು ತೀರ್ಮಾನಿಸಿತು. |
| **3)** | ದಿನಾಂಕ: 06/03/2026 ರಂದು ನಡೆದ ಸ್ಥಿರ ಆಸ್ತಿ ಮಂಡಳಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಕುರಿತು. |
| **ನಿರ್ಣಯ** | ದಿನಾಂಕ 06/03/2026 ರಂದು ನಡೆದ ಸ್ಥಿರ ಆಸ್ತಿ ಮಂಡಳಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು. |
| | **ಸಿಆಸು (ಶಿಕ್ಷಕ) ವಿಭಾಗ** |
| **4)** | ಡಾ. ಆರ್.ಎಲ್. ಹೈದ್ರಾಬಾದ, ಹಿರಿಯ ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ ಇವರನ್ನು ಕಿಮ್ಸ್ ವಿಭಾಗಕ್ಕೆ(MBA Dept) Adjunct Professor ಎಂದು ನೇಮಕ ಮಾಡುವ ಕುರಿತು ನಿರ್ದೇಶಕರು, ಕಿಮ್ಸ್ ವಿಭಾಗ, ಕವಿವಿ,ಧಾರವಾಡ ಇವರು ಕುಲಪತಿಗಳಿಂದ ಅನುಮೋದನೆ ಪಡೆದು ಸಲ್ಲಿಸಿದ ಟಿಪ್ಪಣಿ ಮತ್ತು ದಿನಾಂಕ 23/02/2026 ರಂದು ಸಲ್ಲಿಸಿದ ಪತ್ರವನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | ಡಾ. ಆರ್.ಎಲ್. ಹೈದ್ರಾಬಾದ, ಹಿರಿಯ ಪ್ರಾಧ್ಯಾಪಕರು (ನಿವೃತ್ತ), ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ ಇವರನ್ನು ಕಿಮ್ಸ್ ವಿಭಾಗಕ್ಕೆ(MBA Dept) Adjunct Professor ಎಂದು ನೇಮಕ ಮಾಡುವ ಕುರಿತು ನಿರ್ದೇಶಕರು, ಕಿಮ್ಸ್ ವಿಭಾಗ, ಕವಿವಿ, ಧಾರವಾಡ ಇವರು ಕುಲಪತಿಗಳಿಂದ ಅನುಮೋದನೆ ಪಡೆದು ಸಲ್ಲಿಸಿದ ಟಿಪ್ಪಣಿ ಮತ್ತು ದಿನಾಂಕ 23/02/2026 ರಂದು ಸಲ್ಲಿಸಿದ ಪತ್ರವನ್ನು ಪರಿಶೀಲಿಸಿ, ಸಿಂಡಿಕೇಟ್ ಅನುಮೋದಿಸಿತು. |
| **5)** | ಕೃತಿಚೌರ್ಯ ಪ್ರಕರಣ-2 (Plagiarism Case-II) ಹಾಗೂ ಸ್ವಕೃತಿ ಚೌರ್ಯ (Self Plagiarism) ಪ್ರಕರಣದ IAIP ಸಮಿತಿಯ ಸದಸ್ಯ ಕಾರ್ಯದರ್ಶಿಗಳು ದಿನಾಂಕ: 31/03/2026ರ ಪತ್ರದ ಮೂಲಕ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವರದಿಯನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | ಕೃತಿಚೌರ್ಯ ಪ್ರಕರಣ-2 (Plagiarism Case-II) ಹಾಗೂ ಸ್ವಕೃತಿ ಚೌರ್ಯ (Self Plagiarism) ಪ್ರಕರಣದ IAIP ಸಮಿತಿಯ ಸದಸ್ಯ ಕಾರ್ಯದರ್ಶಿಗಳು ದಿನಾಂಕ: 31/03/2026ರ ಪತ್ರದ ಮೂಲಕ ಮುಚ್ಚಿದ ಸಲ್ಲಿಸಿದ ಲಕೋಟೆಯನ್ನು ಸಿಂಡಿಕೇಟ್‌ದಲ್ಲಿ ತೆರೆದು ಓದಲಾಯಿತು. ಅದರಂತೆ, IAIP ಸಮಿತಿ ಸಲ್ಲಿಸಿದ ವರದಿಯನ್ನು ಒಪ್ಪಲಾಯಿತು. ಮುಂದುವರೆದು, ಸಮಿತಿ ಶಿಫಾರಸ್ಸಿನಂತೆ UGC ನಿಯಮಾವಳಿಗಳ ಪ್ರಕಾರ ಕ್ರಮ ಜರುಗಿಸಲು ಸಿಂಡಿಕೇಟ್ ನಿರ್ಣಯಿಸಿತು. |

ಕುಲಸಚಿವರು



ಕುಲಪತಿಗಳು

| | |
|---|---|
| 6) | ಡಾ.ಜೆ.ಎಲ್. ರಾಠೋಡ, ಪ್ರಾಧ್ಯಾಪಕರು, (ಅಮಾನತ್ತು) ಕಡಲುಜೀವಶಾಸ್ತ್ರ, ವಿಭಾಗ, ಕವಿವಿ ಸ್ನಾತಕೋತ್ತರ ಕೇಂದ್ರ, ಕೋಡಿಬಾಗ, ಕಾರವಾರ ಇವರು ಮೈಸೂರು ನಗರದ ರೈಲ್ವೆ ಕೋ-ಆಪ್‌ರೇಟಿವ ಬ್ಯಾಂಕ ನಿಯಮಿತ ಮೈಸೂರು ಇಲ್ಲಿಯ ವಿವಿಧ ಹುದ್ದೆಗಳ ನೇಮಕಾತಿಯ ಕುರಿತಂತೆ ನಿಯಮಬಾಹಿರವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜರುಗಿಸಿ ನೇಮಕಾತಿ ಪ್ರಕ್ರಿಯೆಯಲ್ಲಿ ಅಧಿಕಾರ ದುರ್ಬಳಕೆ ಮಾಡಕೊಂಡಿರುವ ಪ್ರಕರಣದ ಕುರಿತಂತೆ ಶ್ರೀ.ಎಸ್.ಎಸ್.ಬಳ್ಳೊಳ್ಳಿ, ವಿಶ್ರಾಂತ ನ್ಯಾಯಾಧೀಶರು ಮತ್ತು ವಿಚಾರಣಾಧಿಕಾರಿಗಳು, ಇಲಾಖಾ ವಿಚಾರಣಾ ಸಮಿತಿ, ಇವರು ದಿನಾಂಕ:17.04.2026 ರಂದು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ಅಂತಿಮ ವರದಿಯನ್ನು ಪರಿಶೀಲಿಸುವ ಕುರಿತು. |
| ನಿರ್ಣಯ | ಡಾ.ಜೆ.ಎಲ್. ರಾಠೋಡ, ಪ್ರಾಧ್ಯಾಪಕರು, (ಅಮಾನತ್ತು) ಕಡಲುಜೀವಶಾಸ್ತ್ರ, ವಿಭಾಗ, ಕವಿವಿ ಸ್ನಾತಕೋತ್ತರ ಕೇಂದ್ರ, ಕೋಡಿಬಾಗ, ಕಾರವಾರ ಇವರು ಮೈಸೂರು ನಗರದ ರೈಲ್ವೆ ಕೋ-ಆಪ್‌ರೇಟಿವ ಬ್ಯಾಂಕ ನಿಯಮಿತ ಮೈಸೂರು ಇಲ್ಲಿಯ ವಿವಿಧ ಹುದ್ದೆಗಳ ನೇಮಕಾತಿಯ ಕುರಿತಂತೆ ನಿಯಮಬಾಹಿರವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜರುಗಿಸಿ ನೇಮಕಾತಿ ಪ್ರಕ್ರಿಯೆಯಲ್ಲಿ ಅಧಿಕಾರ ದುರ್ಬಳಕೆ ಮಾಡಕೊಂಡಿರುವ ಪ್ರಕರಣದ ಕುರಿತಂತೆ ಶ್ರೀ.ಎಸ್.ಎಸ್.ಬಳ್ಳೊಳ್ಳಿ, ವಿಶ್ರಾಂತ ನ್ಯಾಯಾಧೀಶರು ಮತ್ತು ವಿಚಾರಣಾಧಿಕಾರಿಗಳು, ಇಲಾಖಾ ವಿಚಾರಣಾ ಸಮಿತಿ, ಇವರು ದಿನಾಂಕ 17.04.2026 ರಂದು ಸಲ್ಲಿಸಿದ ಅಂತಿಮ ವರದಿಯ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ್‌ನಲ್ಲಿ ತೆರೆದು ಓದಲಾಯಿತು. ಅದರಂತೆ, ಸದರಿ ಸಮಿತಿಯು ಸಲ್ಲಿಸಿದ ಅಂತಿಮ ವರದಿಯನ್ನು ಒಪ್ಪಲಾಯಿತು. ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮ ಜರುಗಿಸಲು ತೀರ್ಮಾನಿಸಿತು. |
| | **ಸಿಂಡಿಕೇಟ ವಿಭಾಗ** |
| 7) | ಫೆಬ್ರುವರಿ-2026 ರಿಂದ ಎಪ್ರೀಲ್-2026ರಲ್ಲಿ ಹಿಂದಿ, ಭೂ-ವಿಜ್ಞಾನ, ಭೂಗೋಳಶಾಸ್ತ್ರ, ತತ್ವಶಾಸ್ತ್ರ, ಪ್ರಾಣಿಶಾಸ್ತ್ರ, ಮಾನವಶಾಸ್ತ್ರ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಗಣಿತಶಾಸ್ತ್ರ, ಮತ್ತು ಇತಿಹಾಸ ಮತ್ತು ಶಾಸನಶಾಸ್ತ್ರ, ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. |
| ನಿರ್ಣಯ | ಫೆಬ್ರುವರಿ-2026 ರಿಂದ ಎಪ್ರೀಲ್-2026ರಲ್ಲಿ ಹಿಂದಿ, ಭೂವಿಜ್ಞಾನ, ಭೂಗೋಳಶಾಸ್ತ್ರ, ತತ್ವಶಾಸ್ತ್ರ, ಪ್ರಾಣಿಶಾಸ್ತ್ರ, ಮಾನವಶಾಸ್ತ್ರ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಗಣಿತಶಾಸ್ತ್ರ, ಮತ್ತು ಇತಿಹಾಸ ಮತ್ತು ಶಾಸನಶಾಸ್ತ್ರ, ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು. |

ಕುಲಸಚಿವರು



ಕುಲಪತಿಗಳು

| | |
|---|---|
| | **ವಿದ್ಯಾಮಂಡಳ (ಎಸ್&ಟಿ) ವಿಭಾಗ** |
| **8)** | ಅಡ್-ಹಾಕ್ ಸಮಿತಿಯಿಂದ ಅಭ್ಯಾಸಸೂಚಿ ಮಂಡಳಿಗೆ ಸೇರ್ಪಡಿಸಲು ರಚಿಸಿದ ಕರಡು ಅನುಶಾಸನವನ್ನು ಅನುಮೋದನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ 44(1)c ರಂತೆ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದಿಸಿದ ನಿರ್ಣಯವನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | ಅಡ್-ಹಾಕ್ ಸಮಿತಿಯಿಂದ ಅಭ್ಯಾಸಸೂಚಿ ಮಂಡಳಿಗೆ ಸೇರ್ಪಡಿಸಲು ರಚಿಸಿದ ಕರಡು ಅನುಶಾಸನದಲ್ಲಿ BTTM ಹಾಗೂ MTTM ಕಾರ್ಯಕ್ರಮಗಳನ್ನು ಹೊರತುಪಡಿಸಿ ಉಳಿದ ವಿಷಯಗಳ ಅನುಶಾಸನವನ್ನು ಅನುಮೋದನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ 44(1)c ರಂತೆ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರಕಾರಕ್ಕೆ ಕಳುಹಿಸಲು ಒಪ್ಪಲಾಯಿತು. |
| | **ಪಿಎಮ್ -ಉಷಾ ವಿಭಾಗ** |
| **9)** | Placing the item of Revised Detailed Project Report (DPR) of Pradhan Mantri Uchahatar Shiksha Abhiyan (PM-UShA) Scheme and Standard Operating Procedures (SOPs) for Conducting Programmes under Soft Component Activities before the Syndicate for its consideration and approval-reg. |
| **ನಿರ್ಣಯ** | Syndicate thoroughly discussed and resolved to approved the Revised Detailed Project Report (DPR) of Pradhan Mantri Uchahatar Shiksha Abhiyan (PM-UShA) Scheme and Standard Operating Procedures (SOPs) for Conducting Programmes under Soft Component Activities. |
| | **ಸಿಆಸು (ಶಿಕ್ಷಕೇತರ) ವಿಭಾಗ** |
| **10)** | ಶ್ರೀ. ಗಿರೀಶ ಜೋಶಿ, ಸ್ಥಾನಿಕ ಅಭಿಯಂತರು, ಕಟ್ಟಡ ವಿಭಾಗ, ಕ.ವಿ.ವಿ.ಧಾರವಾಡ ಇವರು ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿದ ಲಿಖಿತ ವಿವರಣೆಯನ್ನು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| **ನಿರ್ಣಯ** | ಶ್ರೀ. ಗಿರೀಶ ಜೋಶಿ, ಸ್ಥಾನಿಕ ಅಭಿಯಂತರು, ಕಟ್ಟಡ ವಿಭಾಗ, ಕ.ವಿ.ವಿ.ಧಾರವಾಡ ಇವರು ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿದ ಲಿಖಿತ ವಿವರಣೆಯನ್ನು ಸಿಂಡಿಕೇಟ್ ಪರಿಶೀಲಿಸಿ, ಒಪ್ಪಲಾಯಿತು. ಮುಂದುವರೆದು, ವಿಶ್ವವಿದ್ಯಾಲಯಕ್ಕೆ ಶ್ರೀ. ಗಿರೀಶ ಜೋಶಿ ಇವರ ಬದಲಿಗೆ ಬೇರೊಬ್ಬ ಸ್ಥಾನಿಕ ಅಭಿಯಂತರನ್ನು ನಿಯೋಜಿಸಲು ಸರ್ಕಾರಕ್ಕೆ ಪತ್ರ ಬರೆಯಬೇಕೆಂದು ತೀರ್ಮಾನಿಸಿತು. |
| | **ಕ್ರೀಡಾ ವಿಭಾಗ** |
| **11)** | 25-02-2026 ರಂದು ಮಧ್ಯಾಹ್ನ 03:00 ಘಂಟೆಗೆ ಜರುಗಿದ ಕ್ರೀಡಾ ಮಂಡಳಿ ಸಭೆಯ ನಡವಳಿಗಳನ್ನು ಪರಿಶೀಲನೆಗಾಗಿ ಸಲ್ಲಿಸಲಾಗಿದೆ. |
| **ನಿರ್ಣಯ** | 25-02-2026 ರಂದು ಜರುಗಿದ ಕ್ರೀಡಾ ಮಂಡಳಿ ಸಭೆಯ ನಡವಳಿಗಳನ್ನು ಪರಿಶೀಲಿಸಿ, ಸಿಂಡಿಕೇಟ್ ಅನುಮೋದಿಸಿತು. |

ಕುಲಸಚಿವರು



ಕುಲಪತಿಗಳು

| | |
|---|---|
| | **ಪರೀಕ್ಷಾ (ಗೌಪ್ಯ) ವಿಭಾಗ** |
| **12)** | ಡಿಜಿಟಲ್ ಮೌಲ್ಯಮಾಪನ ಪದ್ಧತಿಯ ಸಾಧಕ ಬಾಧಕಗಳನ್ನು ಕುರಿತು ಚರ್ಚಿಸಲು ರಚಿಸಿದ ಕಾಸ್ಟ್ ಅನಾಲಿಸಿಸ್ ಸಮಿತಿಯು ನೀಡಿದ ಅಂತಿಮ ವರದಿ ಹಾಗೂ ಮಾಲ್ಯಮಾಪನ ಕಾರ್ಯಕ್ಕೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರು ನೀಡಿದ ಅಭಿಪ್ರಾಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಿದೆ. |
| **ನಿರ್ಣಯ** | ಡಿಜಿಟಲ್ ಮೌಲ್ಯಮಾಪನ ಪದ್ಧತಿಯ ಸಾಧಕ ಬಾಧಕಗಳನ್ನು ಕುರಿತು ಚರ್ಚಿಸಲು ರಚಿಸಿದ ಕಾಸ್ಟ್ ಅನಾಲಿಸಿಸ್ ಸಮಿತಿಯು ನೀಡಿದ ಅಂತಿಮ ವರದಿಯನ್ನು ಸಿಂಡಿಕೇಟ್ ಒಪ್ಪಿ, ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗಿರುವುದರಿಂದ ಡಿಜಿಟಲ್ ಮೌಲ್ಯಮಾಪನ ಪದ್ಧತಿಯನ್ನು ಸ್ಥಗಿತಗೊಳಿಸಲು ನಿರ್ಣಯಿಸಲಾಯಿತು. ಮುಂದುವರೆದು, ಈಗಾಗಲೇ ಪೂರ್ಣಗೊಂಡಿರುವ ಪರೀಕ್ಷೆಗಳ ಉತ್ತರಪತ್ರಿಕೆಗಳನ್ನು ಭೌತಿಕ ಮೌಲ್ಯಮಾಪನ ಮಾಡಲು ಕುಲಸಚಿವರು (ಮೌಲ್ಯಮಾಪನ) ಇವರಿಗೆ ತಿಳಿಸಲು ನಿರ್ಣಯಿಸಲಾಯಿತು. |
| | **ವಿದ್ಯಾಮಂಡಳ (ಎಸ್&ಟಿ) ವಿಭಾಗ** |
| **13)** | Forensic Science & Criminology and Psychology ವಿಭಾಗಗಳನ್ನು ಸಮಾಜ ವಿಜ್ಞಾನ ನಿಖಾಯದಿಂದ ವಿಜ್ಞಾನ & ತಂತ್ರಜ್ಞಾನ ನಿಖಾಯದಲ್ಲಿ ಸೇರ್ಪಡಿಸುವ ಕುರಿತು ರಚಿಸಿದ ಕರಡು ಅನುಶಾಸನವನ್ನು ಅನುಮೋದನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ 44(1)c ರಂತೆ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿದ ನಿರ್ಣಯವನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | Forensic Science & Criminology and Psychology ವಿಭಾಗಗಳನ್ನು ಸಮಾಜ ವಿಜ್ಞಾನ ನಿಖಾಯದಿಂದ ವಿಜ್ಞಾನ & ತಂತ್ರಜ್ಞಾನ ನಿಖಾಯದಲ್ಲಿ ಸೇರ್ಪಡಿಸುವ ಕುರಿತು ರಚಿಸಿದ ಕರಡು ಅನುಶಾಸನವನ್ನು ಅನುಮೋದನೆಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ 44(1)c ರಂತೆ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿದ ನಿರ್ಣಯವನ್ನು ಸಿಂಡಿಕೇಟ್ ಪರಿಶೀಲಿಸಿ ಅನುಮೋದಿಸಿತು. |
| | **ಹಣಕಾಸು (ಆಡಿಟ್) ವಿಭಾಗ** |
| **14)** | ಸನ್ 2023-24 ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಕೈಗೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸುವ ಕುರಿತು. |
| **ನಿರ್ಣಯ** | ಸನ್ 2023-24 ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಕೈಗೊಂಡ ನಿರ್ಣಯವನ್ನು ಸಿಂಡಿಕೇಟ್ ಪರಿಶೀಲಿಸಿ ಅನುಮೋದಿಸಿತು. |
| | **ಬಿಓಎ ವಿಭಾಗ** |
| **15)** | Item for consideration with regard to issue of promotion order to Dr.(Smt). Shridevi P.G. |
| **ನಿರ್ಣಯ** | ಡಾ. (ಶ್ರೀಮತಿ) ಶ್ರೀದೇವಿ ಪಿ.ಜಿ., ಸಹಾಯಕ ಉಪನ್ಯಾಸಕರು, ಸ್ನಾತಕೋತ್ತರ ಇಂಗ್ಲೀಷ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರ ಪದೋನ್ನತಿಗೆ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ, ಸದರಿಯವರ ನೇಮಕಾತಿ ಅಥವಾ ಪದೋನ್ನತಿ ಬಗ್ಗೆ ಮಾನ್ಯ ನ್ಯಾಯಾಲಯದ ಅಥವಾ ಲೆಕ್ಕಪರಿಶೋದನೆಯಲ್ಲಿ ಆಕ್ಷೇಪಣೆಯಾದಲ್ಲಿ, ಅವರು ಪಡೆದ ವೇತನವನ್ನು ಮರುಪಾವತಿಸುವ ಶರತ್ತಿಗೊಳಪಟ್ಟು UNDERTAKING ಪಡೆದು, ಮುಂದಿನ ಕ್ರಮವಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| | **ಕೇಂದ್ರ ಕಾರ್ಯಾಗಾರ** |
| **16)** | ಕವಿವಿ ಅಧಿಕಾರಿಗಳು ಉಪಯೋಗಿಸಲು ವಾಹನಗಳ ಕೊರತೆ ಇದ್ದು ಹೊಸ ವಾಹನಗಳನ್ನು ಖರೀದಿಸುವ ಕುರಿತಾದ ಪ್ರಸ್ತಾವನೆಯನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | ಕವಿವಿ ಅಧಿಕಾರಿಗಳು ಉಪಯೋಗಿಸಲು ವಾಹನಗಳ ಕೊರತೆ ಇದ್ದು ಹೊಸ ವಾಹನಗಳನ್ನು ಖರೀದಿಸುವ ಕುರಿತಾದ ಪ್ರಸ್ತಾವನೆಯನ್ನು ಸಿಂಡಿಕೇಟ್ ಪರಿಶೀಲಿಸಿ, ಕವಿವಿಗೆ ಅವಶ್ಯವಿರುವ ಟ್ರ್ಯಾಕ್ಟರ್ – 01 ಮತ್ತು ಇನ್ನೋವಾ -01 ಮತ್ತು ಇರ್ಟಿಗಾ - 02ಗಳನ್ನು ಖರೀದಿಸಲು ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಿತು. ಹಾಗೆಯೇ, ಮಾನ್ಯ ಕುಲಪತಿಗಳು RTO ರವರ ಜೊತೆ ಚರ್ಚಿಸಿ, ಸದ್ಯ ಇರುವ ವಾಹನಗಳಿಗೆ ಮುಂದಿನ 05 ವರ್ಷ ಮುಂದುವರಿಕೆ ಮಾಡಲು ವಿನಂತಿ ಪತ್ರ ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು. |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬಂದ ವಿಷಯಗಳು** |
| **17)** | ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲರ ಕುರಿತು ಶ್ರೀಮತಿ ಅಂಜನಾ ಬಸನಗೌಡರ, ಸಿಂಡಿಕೇಟ್ ಸದಸ್ಯರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯ ವರದಿಯ ಕುರಿತು |
| **ನಿರ್ಣಯ** | ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲರ ಕುರಿತು ಶ್ರೀಮತಿ ಅಂಜನಾ ಬಸನಗೌಡರ, ಸಿಂಡಿಕೇಟ್ ಸದಸ್ಯರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯ ವರದಿಯಂತೆ ಕೂಡಲೇ ಕ್ರಮವಹಿಸಲು ತೀರ್ಮಾನಿಸಿತು. |
| **18)** | ಡಾ. ರಾಕೇಶ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು, ವಿವಿಯ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯ ಇವರ ಆಂತರಿಕ ಮೌಲ್ಯಮಾಪನ ಮಾಡಿರುವ ಕುರಿತು |
| | ಡಾ. ರಾಕೇಶ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು, ವಿವಿಯ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯ ಇವರು ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನ ಮಾಡಿರುವ ವಿಷಯದ ಕುರಿತು ಸಿಂಡಿಕೇಟ್ ಚರ್ಚಿಸಲಾಗಿ, ಸದರಿಯವರು ತಮ್ಮ ಸಂಬಂಧಿಕರಿದ್ದರು ಕೂಡ ಆಂತರಿಕ ಮೌಲ್ಯಮಾಪನ ಮಾಡಿರುವುದರಿಂದ, ಸದರಿ ವಿದ್ಯಾರ್ಥಿಯ ಜೊತೆ ಸಂಬಂಧದ ಬಗ್ಗೆ, ಪರಿಶೀಲಿಸಿ ಜೂನ 15, 2026ರ ಒಳಗಾಗಿ ವರದಿಯನ್ನು ನೀಡಲು ಈ ಕೆಳಕಾಣಿಸಿದ ಸಮಿತಿಯನ್ನು ರಚಿಸಲು ಸಿಂಡಿಕೇಟ್ ತೀರ್ಮಾನಿಸಿತು.<br>1. ಕುಲಸಚಿವರು (ಮೌಲ್ಯಮಾಪನ) - ಅಧ್ಯಕ್ಷರು<br>2. ಶ್ರೀ ರಾಬರ್ಟ್ ದದ್ದಾಪುರಿ, ಸಿಂಡಿಕೇಟ್ ಸದಸ್ಯ - ಸದಸ್ಯರು<br>3. ಶ್ರೀ ಸಂಜಯ ಕಪಟಕರ, ಸಿಂಡಿಕೇಟ್ ಸದಸ್ಯ - ಸದಸ್ಯರು<br>4. ಉಪಕುಲಸಚಿವರು, ಪರೀಕ್ಷಾ ವಿಭಾಗ - ಸಂಚಾಲಕರು<br>ಮುಂದುವರೆದು, ಡಾ. ರಾಕೇಶ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು ಇವರಿಗೆ ನೀಡಿರುವ ಪರೀಕ್ಷಾ ಕಾರ್ಯಗಳನ್ನು ಸ್ಥಗಿತಗೊಳಿಸಬೇಕೆಂದು ತೀರ್ಮಾನಿಸಿತು. |

ಕುಲಸಚಿವರು



ಕುಲಪತಿಗಳು

| | |
|---|---|
| **19)** | ವನಿತಾ ಸಮಾಜ, ಧಾರವಾಡ ಇವರು ಹೊಸ ಮಹಾವಿದ್ಯಾಲಯದ ಸಂಯೋಜನೆಗೆ ಪಾವತಿಸಬಹುದಾದ ರೂ. 10.00 ಲಕ್ಷ ಭದ್ರತಾ ಠೇವಣಿಯನ್ನು ಕಂತುಗಳಲ್ಲಿ ಪಾವತಿಸಲು ಅನುಮತಿ ಕುರಿತು |
| **ನಿರ್ಣಯ** | ವನಿತಾ ಸಮಾಜ, ಧಾರವಾಡ ಇವರು ಹೊಸ ಮಹಾವಿದ್ಯಾಲಯದ ಸಂಯೋಜನೆಗೆ ಪಾವತಿಸಬಹುದಾದ ರೂ. 10.00 ಲಕ್ಷ ಭದ್ರತಾ ಠೇವಣಿಯನ್ನು ಕಂತುಗಳಲ್ಲಿ ಪಾವತಿಸಲು ಸಲ್ಲಿಸಿದ ವಿನಂತಿ ಅರ್ಜಿಯನ್ನು ಸಿಂಡಿಕೇಟ್‌ದಲ್ಲಿ ಚರ್ಚಿಸಲಾಗಿ, ಸದರಿಯವರಿಗೆ ಭದ್ರತಾ ಠೇವಣಿಯನ್ನು 04 ಕಂತುಗಳಲ್ಲಿ ಪಾವತಿಸಲು ಅವಕಾಶ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **20)** | ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆಯಲ್ಲಿ ಪದವಿಪೂರ್ವ ಮಹಾವಿದ್ಯಾಲಯವನ್ನು (ಕಲಾ & ವಾಣಿಜ್ಯ ವಿಷಯಗಳ) ಪುನರ್ ಆರಂಭಿಸುವ ಕುರಿತು. |
| **ನಿರ್ಣಯ** | ವಿಶ್ವವಿದ್ಯಾಲಯದ ಪಬ್ಲಿಕ್ ಶಾಲೆಯಲ್ಲಿ ಪದವಿಪೂರ್ವ ಮಹಾವಿದ್ಯಾಲಯವನ್ನು (ಕಲಾ & ವಾಣಿಜ್ಯ ವಿಷಯಗಳ) ಪುನರ್ ಆರಂಭಿಸುವ ವಿಷಯವನ್ನು ಸಿಂಡಿಕೇಟ್‌ದಲ್ಲಿ ಸವಿವರವಾಗಿ ಚರ್ಚಿಸಿ, ಈ ವಿಷಯವಾಗಿ DDPI ಅವರಿಗೆ ಅನುಮತಿ ಕೋರಲು ಕೂಡಲೇ ಪತ್ರ ಬರೆಯಲು ತೀರ್ಮಾನಿಸಿತು. |
| **21)** | ಕವಿವಿಯ ಎಲ್ಲ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳಿಗೆ Bio-metric ಹಾಜರಾತಿ ಅಳವಡಿಸುವ ಕುರಿತು |
| **ನಿರ್ಣಯ** | ಈ ಹಿಂದೆ ದಿನಾಂಕ 26.03.2026ರಂದು ಸಿಂಡಿಕೇಟ್‌ದಲ್ಲಿ ಚರ್ಚಿಸಿದಂತೆ, ಕವಿವಿಯ ಎಲ್ಲ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳಿಗೆ Bio-metric ಹಾಜರಾತಿ ಅಳವಡಿಸಲು ತೀರ್ಮಾನಿಸಲಾಗಿದ್ದು, ಕೂಡಲೇ ಕ್ರಮ ಜರುಗಿಸುವಂತೆ ಕುಲಸಚಿವರಿಗೆ ಸಿಂಡಿಕೇಟ್ ಸೂಚಿಸಿತು. |

ಕುಲಸಚಿವರು

ಕುಲಪತಿಗಳು